ನಂದಿನಿ ಬಡಾವಣೆ ಬಗ್ಗೆ

೪೦೨೪. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ನಗರ ನಂದಿನಿ ಬಡಾವಣೆಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಸುಮಾರು ೫೦೦ ಮನೆಗಳನ್ನು ಕೆಡವಿ ನೆಲ ಸಮ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಎಷ್ಟು ಮನೆಗಳನ್ನು ಕೆಡವಲಾಯಿತು ಇದರಿಂದ ಎಷ್ಟು ಜನರಿಗೆ ನಷ್ಟವಾಗಿದೆ ಮತ್ತು ನಷ್ಟವಾಗಿರುವ ಅಂದಾಜಿನ ಮೊತ್ತವೆಷ್ಟು ?

ಇ) ಇವರ ಸಮಸ್ಯೆಗಳನ್ನು ಇತ್ಯರ್ಥಪಡಿಸಲು ಪರಿಶೀಲನಾ ಸಮಿತಿ ಮಾಡಲಾಗಿದೆಯೇ? ಈ ಸಮಿತಿಯಲ್ಲಿ ಯಾರಿದ್ದಾರೆ, ಅವರ ರೂಪರೇಷೆಗಳೇನು ?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಮತ್ತು ಆ) ೨೮೨ ಅನಧಿಕೃತ ಮನೆಗಳನ್ನು ಕೆಡವಲಾಗಿದೆ. ಅನಧಿಕೃತ ಮನೆಗಳಾದುದರಿಂದ ನಷ್ಟದ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಬೆಂಗಳೂರು ಯೋಜನಾ ಕ್ಷೇತ್ರಕ್ಕೆ ಸಂಬಂಧ ಪಟ್ಟಂತೆ ಅನಧಿಕೃತ ಕಟ್ಟಡಗಳನ್ನು ಸಕ್ರಮಗೊಳಿಸುವಂಥ ಪ್ರಕರಣಗಳನ್ನು ಪರಿಶೀಲಿಸಲು ಸರ್ಕಾರವು ಒಂದು ಸ್ಕ್ರೀನಿಂಗ್ ಕಮಿಟಿಯನ್ನು ನೇಮಿಸಿದೆ ಈ ಕಮಿಟಿಯಲ್ಲಿ ಈ ಕೆಳಕಂಡವರಿರುತ್ತಾರೆ.

೧ ಬೆಂಗಳೂರು ಜಿಲ್ಲಾಧಿಕಾರಿ ಅಧ್ಯಕ್ಷರು

೨ ವಿಶೇಷ ಜಿಲ್ಲಾಧಿಕಾರಿ, ಬೆಂಗಳೂರು ಸದಸ್ಯರು

೩ ಡೆಪ್ಯೂಟಿ ಕಮಿಷನರ್ (ಅಭಿವೃದ್ಧಿ) ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರು

೪ ವಿಶೇಷ ಜಿಲ್ಲಾಧಿಕಾರಿ ಮತ್ತು ಸಹಾಯಕ ವಿಶೇಷ ಜಿಲ್ಲಾಧಿಕಾರಿಗಳು, ನಗರ ಭೂ ಪರಿವರ್ತನೆ ಸದಸ್ಯರು

೫ ವಿಶೇಷ ಜಿಲ್ಲಾಧಿಕಾರಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ–ಸದಸ್ಯರು

೬ ನಗರ ಯೋಜನೆ ಸದಸ್ಯರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು ಸದಸ್ಯ—ಕಾರ್ಯದರ್ಶಿ

ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಅಧ್ಯಕ್ಷರೇ, ಇದರಲ್ಲಿ ಸುಮಾರು ೨೮೨ ಅನಧಿಕೃತ ಮನೆಗಳು ಎಂದು ತಾವು ಹೇಳಿದ್ದೀರಿ. ಅನೇಕರಿಗೆ ಬಿ ಡಿ ಎ. ಪರವಾನಿಗೆ ಕೊಟ್ಟು ಎಲೆಕ್ಟ್ರಿಸಿಟಿ ಕೊಟ್ಟು ಅಲ್ಲಿ ಮೊಲ್ಡ್ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಇದು ತಮ್ಮ ಗಮನಕ್ಕೆ ಬಂದಿರಬಹುದು. ಇಂತಹ ಮನೆಗಳು ಅನಧಿಕೃತ ಮನೆಗಳು ಹೇಗೆ ಆಗುತ್ತವೆ ? ಇದನ್ನು ತಾವು ಪರಿಶೀಲನೆ ಮಾಡಿ ನಿಜವಾಗಿ ಎಷ್ಟು ಅನಧಿಕೃತ ಮನೆಗಳು ಇವೆ ಎಷ್ಟು ಅಧಿಕೃತವೆಂದು ಸ್ಪಷ್ಟವಾದ ವಿವರಣೆ ಮಾಡುವುದಕ್ಕೆ ಆಗುತ್ತದೆಯೇ ? ಇನ್ನು ಎರಡನೆಯದಾಗಿ, ನಮ್ಮ ಬೆಂಗಳೂರು ನಗರದ ಸುತ್ತಮುತ್ತ ರೆವಿನ್ಯೂ ಸೈಟುಗಳ ಪ್ರಶ್ನೆ ಇದೆ. ನೀವು ಒಂದು ಸಾರಿ ಈ ಸೈಟ್‌ಗಳನ್ನು ರೆಕಗ್ನೈಜ್ ಮಾಡಲು ಪ್ರಯತ್ನ ಮಾಡುತ್ತೀವೆಂದು ಹೇಳಿದ್ದೀರಿ ಮತ್ತು ಈ ಬಡಾವಣೆಗೆ ನನ್ನ ಜೊತೆಗೆ ಈ ಬಿಡಿಎ ಛೇರ್ಮನ್‌ರವರು ಮತ್ತು ಕಮಿಷನರ್‌ರವರು ಮತ್ತು ಇನ್ನಿತರೆ ಅಧಿಕಾರಿಗಳು ಬಂದಿದ್ದರು. ಆಗ ಅಲ್ಲಿ ಒಂದು ಅಗ್ರಿಮೆಂಟ್ ಆಯಿತು, ಅದೇನೆಂದರೆ ಎಲ್ಲೆಲ್ಲಿ ರಸ್ತೆಗಳ ಪಕ್ಕ ಮನೆಗಳು ಬರುತ್ತವೆ ಅಂತಹ ಮನೆಗಳನ್ನು ತಾವು ಕೆಡವಬೇಡಿ ಅವರಿಗೆ ಪಕ್ಕದಲ್ಲಿ ಅಲ್ಲಿಯೇ ಎಲ್ಲಿಂದಾದರೂ ಹತ್ತಿರದಲ್ಲಿ ಸೈಟ್‌ಗಳು ಇದ್ದರೆ ಕೊಡಿ ಎಂದು ಹೇಳಿದ್ದೆವು. ಅದಕ್ಕೆ ಒಪ್ಪಿಕೊಂಡರು, ಲಿಖಿತ ಮೂಲಕ ಬರೆದು ಸಹ ಕೊಟ್ಟಿದ್ದರು. ಮನೆ ಕೊಡಲಿಕ್ಕೆ ಆಗದಿದ್ದರೆ ಅಲ್ಲಿಯೇ ಸೈಟ್ ಆದರೂ ಕೊಡುವ ಬಗ್ಗೆ ಬಿಡಿಎ ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೀವೆಂದು ಹೇಳಿದ್ದರು. ಇನ್ನು ಮೂರನೆಯದಾಗಿ ಬೆ ರೆ ಸೈಟ್‌ಗಳನ್ನು ಕೊಡತ್ತೇವೆಂದು ಸಹ ತಾವು ಹೇಳಿದ್ದೀರಿ ಇಲ್ಲಿ ಪರವಾನಿಗೆ ಕೊಟ್ಟಿರುವ ಪ್ರಶ್ನೆಯೂ ಇದೆ. ಆದ್ದರಿಂದ ಎಲ್ಲೆಲ್ಲಿ ಅನ್ಯಾಯವಾಗಿದೆ ಅದನ್ನು ಸರಿಪಡಿಸಲು ಕ್ರಮ ತೆಗೆದುಕೊಂಡು ಪರಿಹಾರ ಒದಗಿಸುತ್ತೀರಾ ?

ಶ್ರೀ ಆರ್. ವಿ. ದೇಶಪಾಂಡೆ.—ಈಗ ನಿವೇಶನಗಳಿಗೆ ಜಮೀನನು ಎನ್‌ಕ್ರೋಚ್ ಮಾಡುವುದಕ್ಕೆ ಸಾಧ್ಯವಿಲ್ಲ. ಬೆಂಗಳೂರು ನಗರದಲ್ಲಿ ಕಳೆದ ೫–೬ ವರ್ಷಗಳಿಂದ ಸುಮಾರು ೮೦–೯೦ ಸಾವಿರ ಅರ್ಜಿಗಳು ಪೆಂಡಿಂಗ್ ಇವೆ. ನಂದಿನಿ ಲೇಔಟ್‌ನಲ್ಲಿ ಎನ್‌ಕ್ರೋಚ್‌ಮೆಂಟ್ ಮಾಡಿದ ನಿವೇಶನದಾರರಿಗೆ ಸಂಬಂಧಪಟ್ಟಂತೆ ಈಗಾಗಲೇ ನಾವು ರಚನೆ ಮಾಡಿರುವ ಕಮಿಟಿಯವರು ಪರಿಶೀಲನೆ ಮಾಡುತ್ತಾರೆ. ಆ ಕಮಿಟಿ ರಿಪೋರ್ಟ್ ಬಂದರೆ, ಯಾರಿಗೆ ಅರ್ಹತೆ ಇದೆಯೋ ಅವರುಗಳಿಗೆ ಸರ್ಕಾರ ಸಹಾನುಭೂತಿಯಿಂದ ಪರಿಶೀಲಿಸಿ ಸಹಾಯ ಮಾಡುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಕಮಿಟಿ ರಚನೆ ಮಾಡಿದ್ದೀರಿ. ಕಮಿಟಿ ರಚನೆಯಾದ ಮೇಲೆ ಇದುವರೆಗೆ ನನಗೆ ತಿಳಿದ ಮಟ್ಟಿಗೆ ಸುಮಾರು ೬ ನೂರು ಜನ ಅಪ್ಲಿಕೇಷನ್‌ಗಳನ್ನು ಕೊಟ್ಟಿದ್ದಾರೆ. ಕಮಿಟಿಯವರು ಹೇಳಿರುವ ಪ್ರಕಾರ ಅರ್ಜಿದಾರರು ಎಲ್ಲಾ ದಾಖಲೆಗಳನ್ನೂ ಕೊಟ್ಟಿದ್ದಾರೆ. ಆದರೆ, ಈ ಕಮಿಟಿಯಲ್ಲಿ ಇದುವರೆಗೂ ಯಾವ ರೀತಿಯಾದ ಕೆಲಸವೂ ನಡೆದಿಲ್ಲವೆಂದು ನನಗೆ ಬಂದ ವರದಿಯಿಂದ ಗೊತ್ತಾಗಿದೆ. ಆ ಕಮಿಟಿಗೆ ವರದಿಯನ್ನು ಸಲ್ಲಿಸುವುದಕ್ಕೆ ಒಂದು ಟೈಮ್ ಲಿಮಿಟ್‌ನ್ನು ಫಿಕ್ಸ್ ಮಾಡಿ. ಅಧಿಕಾರಿಗಳು ಕಾನೂನು ದೃಷ್ಟಿಯಿಂದ ನೋಡುತ್ತಾರೆ ಆದರೆ ಲಕ್ಷಾಂತರ ರೂಪಾಯಿಗಳನ್ನು ಜನರು ಕಳೆದುಕೊಂಡಿದ್ದಾರೆ. ತಾವುಗಳೇ ಮಾನವೀಯತೆ ದೃಷ್ಟಿಯಿಂದ ಪರಿಶೀಲಿಸಿ ಆದಷ್ಟು ಬೇಗ ಇತ್ಯರ್ಥ ಮಾಡಿ ಯಾರು ಮನೆಗಳನ್ನು ಕಳೆದುಕೊಂಡಿದ್ದಾರೋ ಅವರುಗಳಿಗೆ ನಿವೇಶನ ಕೊಡುವ ಬಗ್ಗೆ ಭರವಸೆಯನ್ನು ಕೊಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ತಮ್ಮ ಕೆಲಸವನ್ನು ಆದಷ್ಟು ಶೀಘ್ರವಾಗಿ ಮಾಡುವುದಕ್ಕೆ ನಾನು ಕಮಿಟಿಯವರಿಗೆ ತಿಳಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಇನ್ನೊಂದು ಪ್ರಶ್ನೆ. ತಮ್ಮ ಗಮನಕ್ಕೆ ತರುವುದೇನೆಂದರೆ, ಈ ಕಮಿಟಿಯಲ್ಲಿ ತೀರ್ಮಾನ ಆಗುವತನಕ ಆ ಜಾಗದಲ್ಲಿ ಬೇರೆಯವರಿಗೆ ಸೈಟುಗಳನ್ನು ಹಂಚುವ ಕೆಲಸವನ್ನಾಗಲೀ ಮನೆಗಳನ್ನು ಕಟ್ಟಿಸುವ ಕೆಲಸವನ್ನಾಗಲೀ ರೋಡುಗಳನ್ನು ಮಾಡುವ ಕೆಲಸವನ್ನಾಗಲಿ ಮಾಡುವುದಿಲ್ಲವೆಂದು ತಾತ್ಕಾಲಿಕ ಭರವಸೆಯನ್ನು ಅಧಿಕಾರಿಗಳು ಕೊಟ್ಟಿದ್ದರು. ಆದರೆ, ಈ ಭರವಸೆಯನ್ನು ಉಲ್ಲಂಘಿಸಿ ಕೆಲಸಗಳನ್ನು ಅಧಿಕಾರಿಗಳು ಮಾಡಿಸುತ್ತಿರುವುದರಿಂದ ಅಲ್ಲಿ ವಾಸವಾಗಿರುವ ಜನರು ಭಯಭೀತರಾಗಿದ್ದಾರೆ. ಇದಕ್ಕೆ ತಾವು ಏನಾದರು ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಆರ್. ವಿ. ದೇಶಪಾಂಡೆ.—ಈ ಲೇ–ಔಟ್‌ನಲ್ಲಿ ಮನೆಗಳನ್ನು ಕೆಡವಿರುವ ಬಗ್ಗೆ ಕೋರ್ಟಿನಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿದ್ದಾರೆ. ಆ ರಿಟ್ ಅರ್ಜಿ ಇತ್ಯರ್ಥವಾಗುವವರೆಗೆ ಯಾವ ಮನೆಗಳನ್ನು ಡೆಮಾಲಿಷನ್ ಮಾಡಬಾರದೆಂದು ಹೈಕೋರ್ಟ್‌ನವರು ಸರ್ಕಾರಕ್ಕೆ ಆದೇಶ ಕೊಟ್ಟಿದ್ದಾರೆ. ಹೈಕೋರ್ಟ್ ಆದೇಶ ಇರುವುದರಿಂದ ಯಾವ ಮನೆಗಳನ್ನೂ ಡೆಮಾಲಿಷನ್ ಮಾಡುತ್ತಿಲ್ಲ. ಆದರೆ ಯಾವ ಜಾಗದಲ್ಲಿ ಹೈಕೋರ್ಟ್‌ನ ತಡೆ ಆಜ್ಞೆ ಇಲ್ಲವೋ ಅಂಥಾ ಕಡೆ ಡೆವಲಪ್‌ಮೆಂಟ್ ವರ್ಕ್ಸ್‌ಗಳಿಗೆ ಅಡ್ಡ ಬರುವ ಮನೆಗಳನ್ನು ಡೆಮಾಲಿಷನ್ ಮಾಡಬೇಕಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಇಲ್ಲಿ ಒಂದು ಪ್ರಾಬ್ಲಮ್ ಇದೆ. ಏನು ಎಂದರೆ, ಈ ಲೇಔಟ್‌ನಲ್ಲಿ ಬೇರೆಯವರಿಗೆ ಸೈಟುಗಳನ್ನು ಅಲಾಟ್ ಮಾಡಿಬಿಟ್ಟಿದ್ದೀರಿ. ಆದ್ದರಿಂದ, ಸೈಟುಗಳು ಅಲಾಟ್ ಆದವರಿಗೂ ಈಗ ಅಲ್ಲಿ ಮನೆ ಕಟ್ಟಿಕೊಂಡಿರುವವರುಗಳಿಗೂ ಕ್ಲಾಷ್ ನಡೆಯುತ್ತಿರುತ್ತದೆ. ಆದ್ದರಿಂದ, ನೀವು ಯಾರಿಗೆ ಆ ಜಾಗದಲ್ಲಿ ಸೈಟುಗಳನ್ನು ಅಲಾಟ್ ಮಾಡಿದ್ದೀರೋ ಅವರುಗಳಿಗೆ ಬೇರೆ ಕಡೆ ಸೈಟುಗಳನ್ನು ಕೊಡುವ ವ್ಯವಸ್ಥೆ ಮಾಡಿ. ಇದರ ಬಗ್ಗೆ ತಾವು ಸ್ವಪ್ರೇರಣೆಯಿಂದ ಉತ್ತರ ಕೊಡಬೇಕು.

ಶ್ರೀ ಆರ್. ವಿ. ದೇಶಪಾಂಡೆ.—ಆದನ್ನು ಪರಿಶೀಲನೆ ಮಾಡಿ ಆದಷ್ಟು ಬೇಗ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.